**ಮೂ.ದಾ.ನಂ. 90/2017**

ಪಿ.ಡಬ್ಲ್ಯು.1

(ಇಂದು ದಿನಾಂಕ: **18-02-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ.ಆರ್.ಜಿ.ಎನ್ ವಕೀಲರಿಂದಃ**

ನಾನು ನಮ್ಮ ವಕೀಲರಿಗೆ ಪ್ರತಿವಾದ ಪತ್ರವನ್ನು ಬರೆಯಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ವಾದಿಯು ಮನೆಯನ್ನು ಕಟ್ಟಲು ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದುಕೊಂಡಿಲ್ಲ ಎಂಬ ಬಗ್ಗೆ ಮೌಖಿಕವಾಗಿ ತಿಳಿದುಕೊಂಡಿರುತ್ತೇನೆ. ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ವಿಷಯವನ್ನು ಯಾವ ವರ್ಷದಂದು ಕೇಳಿರುತ್ತೇನೆ ಎಂಬ ಬಗ್ಗೆ ನನಗೆ ಈಗ ನೆನಪಿಗೆ ಬರುತ್ತಿಲ್ಲ. ಪ್ರತಿವಾದ ಪತ್ರವನ್ನು ತಯಾರಿಸುವ ಸಮಯದಲ್ಲಿ ನಾನು ಮೌಖಿಕವಾಗಿ ವಿಚಾರಿಸಿದ ದಿನಾಂಕವನ್ನು ನಮ್ಮ ವಕೀಲರಿಗೆ ತಿಳಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಕಲ್ಕೋಟ ಮಜರೆಯಲ್ಲಿ ಒಟ್ಟಾಗಿ ನಿರ್ದಿಷ್ಟವಾಗಿ 103 ಮನೆಗಳು ಇವೆ. ಸದ್ರಿ ಜಾಗದಲ್ಲಿ 70 ಕ್ಕಿಂತ ಹೆಚ್ಚಿನ ಮನೆಗಳು ಇರುವುದಿಲ್ಲ. ದಾವಾ ಸ್ಥಳವು ಅಘನಾಶಿನಿ ನದಿಯಿಂದ 500 ಮೀಟರ ದೂರದಲ್ಲಿ ಇದೆ. ದಾವಾ ಸ್ಥಳವು ಅಘನಾಶಿನಿ ನದಿಯಿಂದ 4 ಕಿಮೀ ದೂರದಲ್ಲಿ ಇದೆ ಎಂದರೆ ಸರಿಯಲ್ಲ. ದಾವಾ ಸ್ಥಳದಲ್ಲಿ ಯಾವುದೇ ಗುಡ್ಡಗಾಡು ಪ್ರದೇಶಗಳು ಇಲ್ಲ ಎಂದರೆ ಸರಿಯಲ್ಲ. ಸದ್ರಿ ದಾವಾ ಸ್ಥಳದಲ್ಲಿ ಯಾವುದೇ ಗುಡ್ಡೆ ಇರದೇ ಇದ್ದರೂ ಕೂಡ ಮೂಡುಗುಡ್ಡೆ ಎಂದು ಕರೆಯುತ್ತಾರೆ ಎಂದರೆ ಸಾಕ್ಷಿಯು ದಾವಾ ಸ್ಥಳದಿಂದ ಮೂಡುಗುಡ್ಡೆಯು 500 ಮೀಟರ ದೂರದಲ್ಲಿ ಇದೆ ಎಂದು ನುಡಿಯುತ್ತಾರೆ.

**ಮೂ.ದಾ.ನಂ. 90/2017**

ಪಿ.ಡಬ್ಲ್ಯು 1

ನಾವು ತಿರುಗಾಡುವ ಡಾಂಬರ ರಸ್ತೆಯು ಎಷ್ಟು ಉದ್ದ ಹಾಗೂ ಅಗಲ ಇದೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿರಬಹುದು. ಸದ್ರಿ ರಸ್ತೆಯು ಯಾವ ಸಾಲಿನಲ್ಲಿ ನಿರ್ಮಾಣ ಮಾಡಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನಗೆ ಈ ಕುರಿತಂತೆ ದಾಖಲಾತಿಗಳನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಾವು ಗಜಾನನ ಚಿದಂಬರ ಭಟ್ಟ ಇವರನ್ನು ಅವಶ್ಯ ಪಕ್ಷಗಾರರನ್ನಾಗಿ ಮಾಡದೇ ಈ ದಾವೆಯು ನಡೆಯತಕ್ಕದ್ದಲ್ಲ ಎಂದು ಹೇಳಿರುವುದಿಲ್ಲ. ದಾವಾ ಸ್ಥಳವು ದಕ್ಷಿಣಕ್ಕೆ ಎತ್ತರದಲ್ಲಿ ಇದ್ದು ಆದರೆ ಸದ್ರಿ ಸ್ಥಳವು ಎಷ್ಟು ಎತ್ತರವಾಗಿದೆ ಎಂದು ನನಗೆ ತಿಳಿದಿಲ್ಲ. ನಾವು ಪ್ರತಿದಿನ ದಾವಾ ಸ್ಥಳದ ದಾರಿಯಲ್ಲಿ ತಿರುಗಾಡಬೇಕು ಎಂದರೆ ಸರಿ. ದಾವಾ ಸ್ಥಳದ ದಕ್ಷಿಣ ದಿಕ್ಕಿನಲ್ಲಿ ಎತ್ತರವಾಗಿದೆ ಎಂಬುವುದನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಿರಬಹುದು.

ಶಂಕರ ಪಟಗಾರ ಎಂಬುವವರ ಮನೆಯು ದಾವಾ ಸ್ಥಳಕ್ಕೆ ತಾಗಿ ಇತ್ತೀಚಿನ ಮೂರು ವರ್ಷದಲ್ಲಿ ನಿರ್ಮಾಣ ಆಗಿರುತ್ತದೆ. ಈ ಕುರಿತಂತೆ ಅವರು ನಿಖರವಾಗಿ ಯಾವ ವರ್ಷದಂದು ಜಾಗವನ್ನು ಖರೀದಿ ಮಾಡಿದ್ದಾರೆ ಹಾಗೂ ಮನೆಯನ್ನು ಕಟ್ಟಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದ್ರಿಯವರಿಗೆ ಮನೆಯನ್ನು ಕಟ್ಟುವಂತಹ ಸಂದರ್ಭದಲ್ಲಿ ನೀವು ಈ ಜಾಗದಲ್ಲಿ ಮನೆಯನ್ನು ಕಟ್ಟಬೇಡಿ ಇದಕ್ಕೆ ಸಂಭಂಧಿಸಿದಂತೆ ದಾವೆ ಇದೆ ಎಂದು ನಾವು ಹೇಳಿರುವುದಿಲ್ಲ.

ವಾದಿಯು ರಸ್ತೆಯ ಮೇಲೆ ಪಾಗಾರವನ್ನು ಕಟ್ಟಿದ್ದಾರೆ ಎಂಬ ಬಗ್ಗೆ ದಾಖಲಾತಿಗಳನ್ನು ನಾವು ನ್ಯಾಯಾಲಯಕ್ಕೆ ಕೊಟ್ಟಿರಬಹುದು. 1ನೇ ಪ್ರತಿವಾದಿಯರ ಕೊಟ್ಟಿಗೆಯು ದಾವಾ ಸ್ಥಳದಿಂದ 15 ಫೂಟು ದೂರದಲ್ಲಿ ಇದೆ. 1ನೇ ಪ್ರತಿವಾದಿಗೆ ಸಂಬಂಧಿಸಿದ ಕೊಟ್ಟಿಗೆಯ ಪಶ್ಚಿಮ ದಿಕ್ಕಿಗೆ 15 ಫೂಟು ದೂರದಲ್ಲಿ

ಕೊಟ್ಟಿಗೆ ಇದೆ. ದಾವಾ ಸ್ಥಳದಲ್ಲಿ ಇದ್ದ ಮೋರಿಯಲ್ಲಿ ನೀರು ಹೋಗದಂತೆ ವಾದಿಯು ಮುಚ್ಚಿರುತ್ತಾರೆ. ನಾವು ಈ ವಿಷಯವನ್ನು ನಮ್ಮ ಪಂಚಾಯತಿಗೆ ತಿಳಿಸಿರುತ್ತೇವೆ. ನಾವು ಈ ವಿಷಯವನ್ನು ತಹಶೀಲದಾರ ಹಾಗೂ ನ್ಯಾಯ ಸಮಿತಿಗೆ ಲಿಖಿತವಾಗಿ ನೀಡಿರುವುದಿಲ್ಲ. ನಮಗೆ ಈ ಕುರಿತಾಗಿ ಲಿಖಿತ ದೂರನ್ನು ನೀಡಲು ಯಾವುದೇ ತೊಂದರೆ ಇರಲಿಲ್ಲ. ನಾವು ಪ್ರತಿವಾದಿಯರು ಎಲ್ಲರೂ ಸೇರಿ ದಾವಾ ಸ್ಥಳದಲ್ಲಿ ಇದ್ದ ಮೋರಿಯನ್ನು ಮುಚಿಚರುತ್ತೇವೆ ಎಂದರೆ ಸರಿಯಲ್ಲ. ದಿಃ 22-06-2017 ರಂದು ವಾದಿಯು ಈ ಕುರಿತಾಗಿ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಸದ್ರಿ ದೂರನು ಕ್ರೈ ನಂ. 210/2017 ಎಂದು ದಾಖಲಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾವು 45 ಜನ ಪ್ರತಿವಾದಿಯರು ಒಟ್ಟೂ ಸೇರಿ ವಾದಿಯು ಮುಚ್ಚಿದ ಮೋರಿಯನ್ನು ತೆರೆಯಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಸದ್ರಿ ಮೋರಿಯು ಒಂದಾನುವೇಳೆ ವಾದಿಯೇ ಮುಚ್ಚಿದ್ದರೆ ನಮಗೆ ಸದ್ರಿ ಮೋರಿಯನ್ನು ಪೊಲೀಸ ಮುಖಾಂತರ ತೆಗೆಯಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾವು ಈ ವಿಷಯವನ್ನು ಎಲ್ಲರಿಗೂ ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಈ ಕುರಿತಾಗಿ ನಮ್ಮ ಪ್ರತಿವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ. ಈ ಕುರಿತಾಗಿ ನಮಗೆ ಪೊಲೀಸ ಠಾಣೆಯಲ್ಲಿ ಯಾವುದೇ ದೂರನ್ನು ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿ.

ನಾವು ನಮ್ಮ ಪ್ರತಿವಾದ ಪತ್ರದಲ್ಲಿ ಸದ್ರಿ ಪಾಗಾರವು ಮಳೆ ನೀರು ನಿಂತು ಶೀಥಿಲವಾಗಿರುತ್ತದೆ ಎಂಬ ಬಗ್ಗೆ ನಮೂದು ಮಾಡಿರುತ್ತೇವೆ. ನಾವು ನಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿದಂತೆ ಮಳೆಯ ನೀರು ಹರಿದು ಹಾಗೂ ಮಳೆಯ ನೀರು ನಿಂತು ಪಾಗಾರವು ಬಿದ್ದು ಹೋಗಿರುತ್ತದೆ ಎಂಬ ಎರಡೂ ವಿಷಯವೂ ಕೂಡ ನಿಜವಾಗಿರುತ್ತದೆ. ವಾದಿಯು ಪಾಗಾರವನ್ನು ಎಷ್ಟು ಉದ್ದ ಹಾಗೂ ಎತ್ತವಾಗಿ ಕಟ್ಟಿದ ಎಂಬ ಬಗ್ಗೆ ನಮ್ಮ

**ಮೂ.ದಾ.ನಂ. 90/2017**

ಪಿ.ಡಬ್ಲ್ಯು 1

ಪ್ರತಿವಾದ ಪತ್ರದಲ್ಲಿ ನಮೂದಿಸಿಲ್ಲ. ನಾನು ನನ್ನ ಪ್ರತಿವಾದ ಪತ್ರವನ್ನು ಸಲ್ಲಿಸುವ ಸಮಯಕ್ಕೆ ವಾದಿಯು ದಾವಾ ಸ್ಥಳದ ರಸ್ತೆಯನ್ನು ತನ್ನ ಹೆಸರಿಗೆ ಮಾಡಿಕೊಳ್ಳಬೇಕು ಎಂಬುವ ಉದ್ದೇಶವನ್ನು ಹೊಂದಿದ್ದನು ಎನ್ನುವ ಕುರಿತಾಗಿ ಹೇಳಿರಬಹುದು. ಸಾರ್ವಜನಿಕ ರಸ್ತೆಯನ್ನು ಯಾವನೇ ಒಬ್ಬ ವ್ಯಕ್ತಿಯು ತನ್ನ ಹೆಸರಿಗೆ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂಬ ಬಗ್ಗೆ ನನಗೆ ತಿಳಿದಿಲ್ಲ. ವಾದಿಯು ಪಾಗಾರವನ್ನು ಡಾಂಬರ ರಸ್ತೆಯ ಮೇಲೆ ಕಟ್ಟಿರುತ್ತಾರೆ. ಸದ್ರಿ ದಾವಾ ಸ್ಥಳದ ರಸ್ತೆಯು ಜಿಲ್ಲಾ ಪಂಚಾಯತದ ರಸ್ತೆ ಆಗಿರುತ್ತದೆ. ವಾದಿಯು ರಸ್ತೆಯ ಮೇಲೆ ಪಾಗಾರ ಕಟ್ಟಿದ ಕುರಿತಾಗಿ ನಾವು ಲಿಖಿತವಾಗಿ ಯಾವುದೇ ದೂರನ್ನು ಜಿಲ್ಲಾ ಪಂಚಾಯತರವರಿಗೆ ನೀಡಿರುವುದಿಲ್ಲ. ಈ ಕುರಿತಾಗಿ ನಾವು ಮೌಖಿಕವಾಗಿ ತಿಳಿಸಿರುತ್ತೇವೆ. ಈ ಕುರಿತಾಗಿ ನಾವು ಮೌಖಿಕವಾಗಿ ತಿಳಿಸಿದ ನಂತರ ಜಿಲ್ಲಾ ಪಂಚಾಯತ ರವರಲ್ಲಿ ಹೋಗಿ ವಿಚಾರಿಸಿರುವುದಿಲ್ಲ ಹಾಗೂ ಈ ಬಗ್ಗೆ ಅವರು ವಾದಿಗೆ ನೋಟಿಸ ನೀಡಿದ ಕುರಿತು ವಿಚಾರಿಸಿರುವುದಿಲ್ಲ. ನಾವು ವಾದಿಯನ್ನು ದಾವಾ ಸ್ಥಳದಿಂದ ಓಡಿಸಬೇಕು ಎಂಬ ಉದ್ದೇಶದಿಂದ ಸುಳ್ಳು ಮಜಕೂರಿನಿಂದ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾವು ದಾವಾ ಸ್ಥಳದಲ್ಲಿ ಇದ್ದ ಮೋರಿಯನ್ನು ಮುಚ್ಚಿಸಿ ವಾದಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯನ್ನು ಉಂಟು ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ದಾವಾ ಸ್ಥಳದ ಸಾರ್ವಜನಿಕರು ವಾದಿಯ ವಿರುದ್ಧ ತಿರುಗಿ ಬೀಳಲಿ ಎಂಬ ಉದ್ದೇಶದಿಂದ ಸದ್ರಿ ಮೋರಿಯನ್ನು ತೆರೆಯಲಿಲ್ಲ ಎಂದರೆ ಸರಿಯಲ್ಲ. ಒಂದಾನುವೇಳೆ ವಾದಿಯು ಸದ್ರಿ ಮೋರಿಯನ್ನು ಮುಚ್ಚಿದರೆ ನಾವೆಲ್ಲರೂ ಸೇರಿ ತೆರೆಯುತ್ತಿದ್ದೇವು ಎಂದರೆ ಸರಿಯಲ್ಲ. ಒಂದಾನುವೇಳೆ ಈ ರೀತಿಯ ತೊಂದರೆ ಆಗುತ್ತಿದ್ದರೆ ನಾವು ಸಂಬಂಧಪಟ್ಟ ಇಲಾಖೆ ದೂರನ್ನು ನೀಡಿ ಸದ್ರಿ ಮೋರಿಯನ್ನು ತೆರೆಯುತ್ತಿದ್ದೇವು ಎಂದರೆ ಸರಿಯಲ್ಲ.

**ಮೂ.ದಾ.ನಂ. 90/2017**

ಪಿ.ಡಬ್ಲ್ಯು.1

ದಾವಾ ಸ್ಥಳದಲ್ಲಿ ಯಾವುದೇ ಗುಡ್ಡ ಇಲ್ಲ ಎಂದರೆ ಸರಿಯಲ್ಲ. ಎತ್ತರವಾದ ಪ್ರದೇಶವನ್ನು ಗುಡ್ಡ ಎಂದು ಬಿಂಬಿಸಿದೇವೆ ಎಂದರೆ ಸರಿಯಲ್ಲ. ದಾವಾ ಸ್ಥಳದಲ್ಲಿ ರಭಸವಾಗಿ ನೀರು ಬರುವಂತಹ ಯಾವುದೇ ಸನ್ನಿವೇಶ ಇಲ್ಲ ಎಂದರೆ ಸರಿಯಲ್ಲ. ನಾವು ಪ್ರತಿವಾದಿ ಎಲ್ಲರೂ ಸೇರಿ ಸದ್ರಿ ಪಾಗಾರವನ್ನು ಕಿತ್ತು ಹಾಕಿದ್ದು, ನೀರಿನಿಂದ ಹೋಯಿತು ಎಂದು ಸುಳ್ಳು ಸಾಧನೆ ಮಾಡುತ್ತಿದೇವೆ ಎಂದರೆ ಸರಿಯಲ್ಲ. ಈ ರೀತಿ ಇರುವುದರಿಂದ ನಮ್ಮ ವಿರುದ್ಧ ಸಿವಿಲ್ ಮಿಸ್ ಪ್ರಕರಣ ದಾಖಲು ಆಗುವಂತೆ ಮಾಡಿದ್ದೇವೆ ಎಂದರೆ ಸರಿಯಲ್ಲ. 6 ಫೂಟು ಎತ್ತರ ಹಾಗೂ 30 ಫೂಟು ಉದ್ದದ ಕಲ್ಲಿನ ಪಾಗಾರವು ನೀರು ಬಂದು ಹೋಗುವ ಸಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ನಾವು ನೀರು ಬಂದು ಸದ್ರಿ ಪಾಗಾರವು ಕಿತ್ತು ಹೋಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜನಬಲ, ಹಣಬಲದಿಂದ ಮತ್ತು ಅಧಿಕಾರದಿಂದ ಈ ರೀತಿಯ ಕೃತ್ಯವನ್ನು ಎಸಗಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ನಾವು ಪಾಗಾರವನ್ನು ಕಿತ್ತು ತೆಗೆದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ